17-7-2019 (7)

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (332)282 |
| 2) ಸದಸ್ಯರ ಹೆಸರು | : | ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) ಉತ್ತರಿಸುವ ದಿನಾಂಕ | : | 17.07.2019 |
| 4) ಉತ್ತರಿಸುವವರು | : | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಒಂದು ವರ್ಷದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಹುಲಿ, ಚಿರತೆ ಮತ್ತು ಕಾಡಾನೆಗಳ ದಾಳಿಯಿಂದ ಮೃತಪಟ್ಟಿರುವ ಹಾಗೂ ಗಾಯಗೊಂಡಿರುವ ರೈತರು, ಸಾರ್ವಜನಿಕರ ಸಂಖ್ಯೆ ಎಷ್ಟು; ಇವರಿಗೆ ಇಲಾಖೆಯಿಂದ ಪರಿಹಾರವನ್ನು ನೀಡಲಾಗಿದೆಯೇ; ವನ್ಯಪ್ರಾಣಿಯ ದಾಳಿಯಿಂದ ಸತ್ತವರ ಕುಟುಂಬದವರಿಗೆ ನೀಡುವ ಪರಿಹಾರ ಧನವನ್ನು 25 ಲಕ್ಷ ರೂ.ಗಳಿಗೆ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದೇ; | ಕಳೆದ ಒಂದು ವರ್ಷದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಹುಲಿ, ಚಿರತೆ, ಕಾಡಾನೆ ಮತ್ತು ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಗಾಯ, ಪ್ರಾಣಹಾನಿ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ: |

| ವರ್ಷ | ಮೈಸೂರು | | ಚಾಮರಾಜನಗರ | |
|---|---|---|---|---|
| | ಮಾನವ ಗಾಯ | ಮಾನವ ಪ್ರಾಣ ಹಾನಿ | ಮಾನವ ಗಾಯ | ಮಾನವ ಪ್ರಾಣ ಹಾನಿ |
| 2018-19 | – | – | 04 | 06 |

ಹೌದು. ಕಳೆದ ಒಂದು ವರ್ಷದಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ 6 ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010, ದಿನಾಂಕ: 30.04.2011ರ ಪ್ರಕಾರ ಪ್ರತಿ ಪ್ರಕರಣಕ್ಕೆ ರೂ.5.00 ಲಕ್ಷಗಳ ದಯಾತ್ಮಕ ಧನವನ್ನು ನಿಯಮಾನುಸಾರ ಪಾವತಿಸಲಾಗಿದೆ ಹಾಗೂ ಮಾನವ ಗಾಯದ 4 ಪ್ರಕರಣಗಳಿಗೆ ರೂ.6,25,027/- ಪರಿಹಾರ ಧನವನ್ನು ಪಾವತಿಸಲಾಗಿದೆ.

ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಲ್ಲಿ ಪಾವತಿಸಲಾಗುತ್ತಿರುವ ರೂ.5.00 ಲಕ್ಷಗಳ ದಯಾತ್ಮಕ ಧನವನ್ನು ಹೆಚ್ಚಳ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಆ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಕಾಡಾನೆ ದಾಳಿಯಿಂದ ಉಂಟಾಗಿರುವ ಬೆಳೆ ಹಾನಿ ಪ್ರಕರಣಗಳು ಎಷ್ಟು; ಪ್ರತಿ ಪ್ರಕರಣದಲ್ಲಿ ಆಗಿರುವ ಹಾನಿಯ ಅಂದಾಜು ಮೊತ್ತ ಪರಿಹಾರ ನೀಡಿದ ಮೊತ್ತ ಎಷ್ಟು; (ವಿವರ ಒದಗಿಸುವುದು) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಕಾಡಾನೆ ಒಳಗೊಂಡಂತೆ ಇತರೆ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗಿರುವ ಬೆಳೆ ಹಾನಿ ಪ್ರಕರಣಗಳು ಈ ಕೆಳಕಂಡತೆ ಇದೆ. |

(ರೂ.ಗಳಲ್ಲಿ)

| ವರ್ಷ | ಮೈಸೂರು | | ಚಾಮರಾಜನಗರ | |
|---|---|---|---|---|
| | ಬೆಳೆಹಾನಿ ಪ್ರಕರಣ | ಪಾವತಿಸಿದ ಮೊತ್ತ | ಬೆಳೆಹಾನಿ ಪ್ರಕರಣ | ಪಾವತಿಸಿದ ಮೊತ್ತ |
| 2018-19 | 693 | 20,67,55[illegible] | 3695 | 1,46,39,201 |

--

(ಇ) ಕಾಡಾನೆ ಹಾವಳಿಯನ್ನು ತಡೆಯುವಲ್ಲಿ ಸೋಲಾರ್ ಬೇಲಿ, ಕಂದಕ ಇವುಗಳನ್ನು ಇನ್ನೂ ಬಿಗಿ ಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ; ಹಾಗೂ ಕಾಡಿನಲ್ಲಿ ಆನೆಗಳಿಗೆ, ಪ್ರಾಣಿಗಳಿಗೆ ನೀರಿನ ವ್ಯವಸ್ಥೆ ಕಲ್ಪಿಸಲು ಆನೆಗಳಿಗೆ ಅಗತ್ಯವಾದ ಬಿದಿರು ಮುಂತಾದ ಮೇವನ್ನು ಬೆಳೆಯಲು ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ಕಳೆದ ಮೂರು ವರ್ಷದಲ್ಲಿ ಮಾಡಿರುವ ವೆಚ್ಚ ಎಷ್ಟು; ಈ ಯೋಜನೆ ಫಲಕಾರಿಯಾಗಿದೆಯೇ?

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಡಾನೆ ಹಾವಳಿಯನ್ನು ತಡೆಯಲು ಇಲಾಖೆಯಿಂದ ಈ ಕೆಳಕಂಡ ಪ್ರಮುಖ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ಯೋಜನೆಗಳು ಫಲಕಾರಿಯಾಗಿರುತ್ತವೆ.

1. ಕಾಡುಪ್ರಾಣಿಗಳು ಅರಣ್ಯ ಪ್ರದೇಶದಂಚಿನಲ್ಲಿರುವ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ದಾಳಿ ಮಾಡುವುದನ್ನು ತಡೆಗಟ್ಟುವ ಸಲುವಾಗಿ ಸೂಕ್ಷ್ಮ ಪ್ರದೇಶಗಳ ಅರಣ್ಯದ ಅಂಚಿನಲ್ಲಿ ಕಾಡಾನೆ ನಿರೋಧಕ ಕಂದಕ ಮತ್ತು ಸೌರಶಕ್ತಿ ಬೇಲಿ ನಿರ್ಮಿಸಿ ನಿರ್ವಹಿಸಲಾಗುತ್ತಿದೆ.
2. ಕಾಡಂಚಿನ ಸೂಕ್ಷ್ಮ ಪ್ರದೇಶಗಳಲ್ಲಿ ಕಾಡಾನೆ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.
3. ಅರಣ್ಯ ಪ್ರದೇಶಗಳಲ್ಲಿ ವನ್ಯ ಪ್ರಾಣಿಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು, ಗಲ್ಲಿಪ್ಲಗ್, ಚೆಕ್‌ಡ್ಯಾಮ್, ನಾಲಾಬಂದ್, ಇತ್ಯಾದಿ ಕೆಲಸಗಳನ್ನು ರಕ್ಷಿತಾರಣ್ಯಗಳಲ್ಲಿ ಕೈಗೊಳ್ಳಲಾಗುತ್ತಿದೆ. ಅಲ್ಲದೇ ಬೋರ್‌ವೆಲ್‌ಗಳನ್ನು ಕೊರೆದು ಸೋಲಾರ್ ಪಂಪ್‌ಗಳನ್ನು ಅಳವಡಿಸಿ ನೀರಿನ ಹೊಂಡಗಳನ್ನು ತುಂಬಲಾಗುತ್ತಿದೆ.
4. ಕಾಡಾನೆಗಳ/ವನ್ಯಜೀವಿಗಳ ಹಾವಳಿ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಪ್ರದೇಶಗಳಲ್ಲಿ ಅವಶ್ಯಕತೆಗನುಗುಣವಾಗಿ Anti Depredation Camp ಗಳನ್ನು ರಚಿಸಿ ಆನೆಗಳನ್ನು ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. ಹಾಗೂ Rapid Response Teams(RRT) ತಂಡಗಳನ್ನು ರಚಿಸಿ ವನ್ಯಜೀವಿಗಳ ಹಾವಳಿ ನಿಯಂತ್ರಿಸಲಾಗುತ್ತಿದೆ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಡಾನೆ ಹಾವಳಿ ನಿಯಂತ್ರಿಸಲು ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ವೆಚ್ಚ ಭರಿಸಲಾಗಿದೆ:

| ವರ್ಷ | ಮೈಸೂರು | ಚಾಮರಾಜನಗರ | ಒಟ್ಟು |
|---|---|---|---|
| 2016-17 | 267.78 | 362.992 | 630.772 |
| 2017-18 | 548.26 | 569.698 | 1117.958 |
| 2019-20 | 705.96 | 444.555 | 1150.515 |
| ಒಟ್ಟು | 1522.00 | 1377.245 | 2899.245 |

ಸಂಖ್ಯೆ: ಅಪಜೀ 41 ಎಫ್‌ಡಬ್ಲ್ಯುಎಲ್ 2019

(ಸತೀಶ್ ಎಲ್. ಜಾರಕಿಹೊಳಿ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು